### ಹೀರೊಗಳು ಏನು ಮಾಡುತ್ತಿದ್ದಾರೆ?

ಸುದೀಪ್, ಯಶ್, ದರ್ಶನ್ ಮಾತ್ರವಲ್ಲ – ಧ್ರುವ ಸರ್ಜಾ, ದುನಿಯಾ ವಿಜಯ್‌ರಂಥ ವರ್ಚಸ್ವೀ ನಟರ ಸಿನಿಮಾ ಕೂಡ 2023ರಲ್ಲಿ ತೆರೆಕಾಣಲಿಲ್ಲ. 'ಪೊಗರು' ನಂತರ ಧ್ರುವ ಸರ್ಜಾ ಹಾಗೂ 'ಸಲಗ' ಚಿತ್ರದ ನಂತರ ದುನಿಯಾ ವಿಜಯ್ ಅವರ ಸಿನಿಮಾ ತೆರೆಕಂಡಿಲ್ಲ. ಎರಡೂ ಸಿನಿಮಾಗಳು ತೆರೆಕಂಡಿದ್ದು 2021ರಲ್ಲಿ. ಎರಡು ಮೂರು ವರ್ಷಕ್ಕೊಮ್ಮೆ ಸಿನಿಮಾ ಮಾಡುವ ನಟರೇ ಹೆಚ್ಚಾದರೆ ಉದ್ಯಮ ಬೆಳೆಯುವುದು ಹೇಗೆ? ಶಿವರಾಜ್‌ಕುಮಾರ್ ಅವರನ್ನು ಹೊರತುಪಡಿಸಿದರೆ, ನಿರಂತರವಾಗಿ ಸಿನಿಮಾ ಮಾಡುವ ನಟರು ಕನ್ನಡ ಚಿತ್ರೋದ್ಯಮದಲ್ಲಿ ಕಡಿಮೆಯಾಗುತ್ತಿದ್ದಾರೆ.




2023ರ ಸಿನಿಮಾಋತು ಆರಂಭಗೊಂಡಿದ್ದು 'ಕಾಕ್‌ಟೈಲ್' ಎನ್ನುವ ಸಿನಿಮಾದ ಮೂಲಕ. 2022ರಲ್ಲಿ ಇನ್ನೂರಕ್ಕೂ ಹೆಚ್ಚು ಸಿನಿಮಾಗಳು ತೆರೆಕಂಡಿದ್ದರೆ, 2023ರ ಡಿಸೆಂಬರ್ ಮಧ್ಯಭಾಗದ ವೇಳೆಗೆ 160ಕ್ಕೂ ಹೆಚ್ಚು ಸಿನಿಮಾಗಳು ಬಿಡುಗಡೆಯಾಗಿದ್ದವು. ಈ ಪಟ್ಟಿಯಲ್ಲಿನ ಸಿನಿಮಾಗಳ ಸಂಖ್ಯೆ ವರ್ಷದ ಕೊನೆಯ ವೇಳೆಗೆ ಮತ್ತಷ್ಟು ಹೆಚ್ಚಿ, ಸಂಖ್ಯಾದೃಷ್ಟಿಯಿಂದ ಚಿತ್ರೋದ್ಯಮ ಸಾಕಷ್ಟು ಕ್ರಿಯಾಶೀಲವಾಗಿದೆ ಎನ್ನುವ ಭಾವನೆ ಉಂಟುಮಾಡುವಂತಿದೆ. ಆದರೆ, ಈ ಕ್ರಿಯಾಶೀಲತೆಯಲ್ಲಿ ಗೆಲುವಿನ ರಂಗು ಮತ್ತು ಹೊಳಪು ಉಳಿದುಕೊಂಡಿದೆಯೇ ಎಂದು ಕೆದಕಿನೋಡಿದರೆ, ಭರವಸೆಗಳೆಲ್ಲ ಹುಸಿಯಾದ ಬುರುಗಿನ ಕಥನಗಳೇ ಕಣ್ಣಿಗೆ ಹೆಚ್ಚು ರಾಚುತ್ತವೆ.

2022ರಲ್ಲಿ ಪುನೀತ್ ರಾಜ್‌ಕುಮಾರ್ ನಟನೆಯ 'ಜೇಮ್ಸ್', 'ಗಂಧದಗುಡಿ', ಯಶ್‌ರ 'ಕೆಜಿಎಫ್: ಚಾಪ್ಟರ್ 2' ಹಾಗೂ ರಿಷಬ್ ಶೆಟ್ಟಿ ನಟನೆ–ನಿರ್ದೇಶನದ 'ಕಾಂತಾರ' ಸಿನಿಮಾಗಳ ಬಹು ದೊಡ್ಡ ಯಶಸ್ಸಿನಿಂದಾಗಿ ಕನ್ನಡ ಚಿತ್ರರಂಗ ಮೇಲ್ನೋಟಕ್ಕಾದರೂ ಗೆಲುವಿನ ಲಹರಿಯಲ್ಲಿತ್ತು. ಆದರೆ, ಆ ಯಶಸ್ಸು ವೈಯಕ್ತಿಕವಾಗಿ ಪರಿಣಮಿಸಿತೇ ಹೊರತು, ಚಿತ್ರರಂಗವನ್ನು ಒಳಗಿನಿಂದ ಗಟ್ಟಿಗೊಳಿಸುವ ಜೀವಜಲದ ಕಸುವು ಅದಕ್ಕಿರಲಿಲ್ಲ ಎನ್ನುವುದಕ್ಕೆ 2023 ನಿದರ್ಶನವಾಯಿತು.

2023ರಲ್ಲೂ ಒಂದಷ್ಟು ಗಮನಾರ್ಹ ಸಿನಿಮಾಗಳು ತೆರೆಕಂಡವು. 'ಪ್ಯಾನ್ ಇಂಡಿಯಾ' ಹಣೆಪಟ್ಟಿಯನ್ನು ಹಚ್ಚಿಕೊಂಡೇ ತೆರೆಕಂಡ, ಆರ್. ಚಂದ್ರು ನಿರ್ದೇಶನದ 'ಕಬ್ಜ' ಸಿನಿಮಾ ಸುದ್ದಿ ಮಾಡಿತಾದರೂ, ಯಶಸ್ಸಿನ ಸದ್ದು ಮಾಡಲಿಲ್ಲ. ಉಪೇಂದ್ರ ನಾಯಕರಾಗಿ ನಟಿಸಿದ್ದ ಈ



'ಪಿಂಕಿ ಎಲ್ಲಿ?' ಸಿನಿಮಾದ ದೃಶ್ಯ



'ಹದಿನೇಳೆಂಟು' ಸಿನಿಮಾದ ದೃಶ್ಯ